
ಮನೆಯಲ್ಲಿರುವುದೊಂದೇ ಅದಕ್ಕೆ ಪರಿಹಾರ.''

ಆದರೆ ನಯಾಂಜೋರದ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಆತನ ಹೇಳಿಕೆಗಳೆಲ್ಲ ಸಾಮಾನ್ಯ ಜ್ಞಾನಹೀನವಾಗಿದ್ದವು. ಆತನ ಮೇಲೆ ಜನರಿಗಿದ್ದ ಮೋಜಿನ ಪ್ರೀತಿಯಿಂದಾಗಿ, ಯಾರೂ ಆತನ ಅಸಾಧ್ಯ ಹೇಳಿಕೆಗಳನ್ನು ಅಲ್ಲಗಳೆಯುತ್ತಿರಲಿಲ್ಲ. ಅಂಥ ಅತಿರೇಕದ ಮಾತುಗಳಿಗೆ ಮಿತಿ ಎಂಬುದೇ ಇರಲಿಲ್ಲ. ನಯಾಂಜೋರದ ವೈಭವಯುತ ಇತಿಹಾಸ ಕುರಿತಂತೆ, ಆತ ವಿವರಿಸುತ್ತಿದ್ದ ಅಸಂಗತ, ಅತಿಶಯೋಕ್ತಿ ಸಂಗತಿಗಳನ್ನು ಕೇಳಿ ಮಂತ್ರಮುಗ್ಧರಾದವರಂತೆ ಜನರು ನಟಿಸುತ್ತಿದ್ದರು. ಅವರ ಉದ್ಗಾರಭರಿತ ಮಾತುಗಳನ್ನು ಆತ ಹೆಮ್ಮೆಯಿಂದಲೇ ಸ್ವೀಕರಿಸುತ್ತಿದ್ದ. ತನ್ನ ಮಾತನ್ನು ಯಾರೂ ನಂಬುತ್ತಿಲ್ಲವೆಂದು ಆತ ಕನಸಿನಲ್ಲಿ ಕೂಡ ಸಂದೇಹಿಸುತ್ತಿರಲಿಲ್ಲ.

*ಭಾಗ: ಎರಡು*

ನಾನು ಸುಮ್ಮನೆ ಕುಳಿತಾಗ, ಕೈಲಾಸ ಬಾಬು ಕುರಿತಂತೆ ನನ್ನಲ್ಲಿರುವ ಆಲೋಚನೆಗಳನ್ನು ಹಾಗೂ ಭಾವನೆಗಳನ್ನು ವಿಶ್ಲೇಷಿಸಿ ನೋಡಲು ಪ್ರಯತ್ನಿಸುತ್ತಿದ್ದೆ. ಆತನನ್ನು ನಾನು ಇಷ್ಟಪಡದಿರುವುದಕ್ಕೆ ಇನ್ನೂ ಬಲವಾದ ಕಾರಣಗಳಿದ್ದವು. ಈಗ ನಾನು ಅವುಗಳ ಬಗ್ಗೆ ವಿವರಿಸುವೆ.

ನಾನು ಸಿರಿವಂತನೋರ್ವನ ಮಗನಾಗಿದ್ದರಿಂದ, ಕಾಲೇಜು ಹಂತದಲ್ಲಿ ಮೋಜು ಮಜಾ ಮಾಡುತ್ತ ದಿನಗಳೆಯಬಹುದಿತ್ತು. ಹಾಗೆ ಮಾಡದೆ, ಪರಿಶ್ರಮ ಪಟ್ಟು ಓದಿ, ನಾನು ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದುಕೊಂಡೆ, ಜೊತೆಗೆ ನನ್ನ ನೈತಿಕ ಚಾರಿತ್ರ್ಯವೂ ನಿಷ್ಕಲಂಕವಾಗಿತ್ತು. ಮಿಗಿಲಾಗಿ ನಾನು ನೋಡಲು ತುಂಬ ಸುಂದರನಾಗಿದ್ದೆ. ನಿಜಕ್ಕೂ ಅತ್ಯಂತ ಸುಂದರನಾಗಿದ್ದೆ ಎಂದು ಹೇಳಿದರೆ ನನ್ನನ್ನು ನಾನೇ ಹೊಗಳಿಕೊಂಡಂತಾಗುತ್ತದೆ. ಆದರೆ ಅದನ್ನು ಸುಳ್ಳೆನ್ನಲಾಗದು.



ಪ್ರಶ್ನಾತೀತವಾಗಿ, ಬಂಗಾಲಿ ತರುಣರಲ್ಲಿಯೇ ನಾನು ಅತ್ಯಂತ ಅನುರೂಪವಾದವನೆಂದು ಹೆಣ್ಣು ಹೆತ್ತವರು ಭಾವಿಸಿದ್ದರು. ಮದುವೆ ಮಾರ್ಕೆಟ್ಟಿನಲ್ಲಿ ನನಗೆ ಪೂರ್ಣ ಬೆಲೆ ದೊರಕುವವರೆಗೆ ಕಾಯಬೇಕೆಂಬುದು ನನ್ನ ಸ್ಪಷ್ಟ ಹಾಗೂ ದೃಢ ಸಂಕಲ್ಪವಾಗಿತ್ತು. ನನ್ನ ಮನದ ಕಣ್ಣೊಳಗೆ ಮೂಡಿದ ನನ್ನ ಆಯ್ಕೆಯ ಚಿತ್ರ ಹೀಗಿತ್ತು. ಆಕೆ ಓರ್ವ ಸಿರಿವಂತ ತಂದೆಯ ಒಬ್ಬಳೇ